ಶ್ರೀ ಕೆ. ಹೆಚ್. ಹನುಮೇಗೌಡ.—೯ ಕೊಳಚೆ ಪ್ರದೇಶಗಳಿವೆ ಎಂದು ಸರ್ಕಾರ ಗುರುತಿಸಿದೆಯಲ್ಲ ಆ ಎಲ್ಲ ಪ್ರದೇಶಗಳನ್ನು ಅಭಿವೃದ್ಧಿಪಡಿಸಿ ನಾಗರೀಕ ಅನುಕೂಲಗಳನ್ನು ಕಲ್ಪಿಸಬೇಕಾದರೆ ಒಟ್ಟು ಎಷ್ಟು ಹಣ ಖರ್ಚು ಮಾಡಬೇಕಾಗುತ್ತದೆ?

ಶ್ರೀ ಧರ್ಮಸಿಂಗ್.—೯ ಕೊಳಚೆ ಪ್ರದೇಶಗಳಲ್ಲಿ ೫೩೧೫ ಜನರಿದ್ದಾರೆ. ಅವರಿಗೋಸ್ಕರ ಈಗಾಗಲೇ ೨೧ ಲಕ್ಷ ರೂಪಾಯಿಗಳಲ್ಲಿ ೩೨೨ ಮನೆಗಳನ್ನು ಕಟ್ಟಿಸತಕ್ಕ ಒಂದು ಯೋಜನೆಯನ್ನು ತಯಾರು ಮಾಡ ಲಾಗಿದ್ದು ಅದಕ್ಕೆ ಮಂಜೂರಾತಿ ಕೂಡ ದೊರೆತು ಅಡಿಗಲ್ಲನ್ನು ಸಹ ಹಾಕಿದ್ದೇವೆ. ಎಸ್ಟಿಮೇಟ್ ಕೂಡ ಸ್ಯಾಂಕ್ಷನ್ ಆಗಿದೆ. ಮತ್ತು ಆ ಪ್ರಕಾರ ಕೆಲಸ ಮಾಡಲು ಸೂಚನೆಗಳನ್ನು ಕೊಟ್ಟಿದ್ದೇವಲ್ಲದೆ ಇತರ ಬೇರೆ ಬೇರೆ ಕೆಲಸಗಳನ್ನು ಮಾಡುತ್ತಿದ್ದೇವೆ. ಅಷ್ಟೇ ಅಲ್ಲದೆ, ಮುನಿಸಿಪಾಲಿಟಿಯವರು ಜಮೀನು ಒದಗಿಸಿ ಕೊಟ್ಟರೆ ಸಣ್ಣ ಸಣ್ಣ ಮನೆಗಳನ್ನು ಸಹ ಕಟ್ಟಿಸಿ ಕೊಡುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಜಿಲ್ಲಾ ಬಂದೀಖಾನೆಯ ಹಿಂಭಾಗದಲ್ಲಿ ಕೊಳಚೆ ಪ್ರದೇಶ ಇದೆ ಎಂದು ಹೇಳಿದ್ದೀರಿ ಅದು ದನಗಳ ಜಾತ್ರೆ ನಡೆಯತಕ್ಕ ಪ್ರದೇಶ. ಆ ಪ್ರದೇಶದಲ್ಲಿ ಕೊಳಚೆ ಪ್ರದೇಶ ಬಂದಿರುವುದರಿಂದ ದನಗಳ ಜಾತ್ರೆಗೆ ಜಾಗ ಇಲ್ಲದೆ ಅನಾನುಕೂಲವಾಗಿದೆ. ಆದ್ದರಿಂದ ಅದನ್ನು ಸ್ಥಳಾಂತರಿ ಸುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ? ಎಷ್ಟು ದಿನಗಳಲ್ಲಿ ಸ್ಥಳಾಂತರಿಸುತ್ತೀರಿ?

ಶ್ರೀ ಧರ್ಮಸಿಂಗ್.—ಆ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಎಲ್ಲ ಕೊಳಚೆ ಪ್ರದೇಶಗಳಲ್ಲಿರ ತಕ್ಕ ಜನಗಳಿಗೂ ಒಂದೇ ಕಡೆ ವಸತಿ ಸೌಲಭ್ಯವನ್ನು ಕಲ್ಪಿಸಿಕೊಡುವ ಸಲುವಾಗಿ ೫ ಎಕರೆ ಜಮೀನನ್ನು ತೆಗೆದುಕೊಂಡು ಅದರಲ್ಲಿ ಸುಮಾರು ೩೦೦ ಮನೆಗಳನ್ನು ಕಟ್ಟಿಸುತ್ತಿದ್ದೇವೆ. ಆ ಮನೆಗಳು ನಿರ್ಮಾಣ ಗೊಳ್ಳುತ್ತಿದ್ದಂತೆಯೇ ಅಲ್ಲಿಗೆ ಎಲ್ಲ ಕೊಳಚೆ ನಿವಾಸಿಗಳನ್ನು ಸ್ಥಳಾಂತರಿಸುತ್ತೇವೆ.

Land grante to Start Poultry Farm in Kollegal.

475 SRI G. RAJUGOWDA (Hanur).—Will the Minister for Revenue be pleased to state.—

(a) the person to whom, when and the extent of Government land was granted to start poultry farm in Kollegal;

(b) the conditions laid down at the time of grant;

(c) whether the Government would take action to rescind the sanction order, if the terms of grant has been violated?

SRI M. MALLIKARJUNA KHARGE (Minister for Revenue).—

(a) The Government land to the extent of 55 cents has been sanctioned to Shri C. S. Balakrishne Gowda, Ex-MLC for construction of a dwelling house and to start poultry Farm at survey No. 708 B1, A-1, A-2 and 707 A, A2 of Kollegal in terms of Government Order No. RD 328 GCF 65, dated 5-5-1966 and possession of the said land was given to him on 23-8-1966.

(b) The terms laid down in the Land grant order was that the grantee has to erect necessary buildings within a period of 12 months from the date of taking possession of the land and to utilise the land for the purpose to which it was intended.

(c) It was brought to the notice of Government, that the terms of Land Grant was violated and a showcause notice was issued to the grantee calling for explanation before rescinding the land grant order. After considering the replies furnished by the grantee for the show cause notice, Government have extented the time-limit upto

24-5-1983 to utilise the land for the purpose to which it was intended as per the said land grant order. Action will be taken by Government to rescind the land grant order, if the land not utilised for the purpose to which it was granted, within the extended period.

ಶ್ರೀ ಜಿ. ರಾಜೂಗೌಡ.—ಯಾವುದೇ ಒಂದು ನಿರ್ದಿಷ್ಟವಾದ ಯೋಜನೆಯನ್ನು ಮಂಜೂರ್ಮಾಡಿದಾಗ ಅದಕ್ಕೆ ಒಂದು ಕಾಲಮಿತಿಯನ್ನು ಸರ್ಕಾರ ಗೊತ್ತು ಮಾಡದೆ ಇರಲು ಕಾರಣವೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾವು ಜಮೀನನ್ನು ಮಂಜೂರುಮಾಡುವಾಗಲೇ ಇಷ್ಟು ಕಾಲದೊಳಗೆ ಮನೆ ಕಟ್ಟಬೇಕೆಂದು ಷರತ್ತು ಹಾಕಿರುತ್ತೇವೆ (ಕಾಲ ಮಿತಿಯನ್ನು ಗೊತ್ತು ಮಾಡಿರುತ್ತೇವೆ).

ಶ್ರೀ ಜಿ. ರಾಜೂಗೌಡ.—ಮಂಜೂರಾತಿ ನಿಬಂಧನೆ ಉಲ್ಲಂಘನೆಯಾದಾಗ ನೇರವಾಗಿ ಸರ್ಕಾರ ಮಂಜೂರಾತಿ ಆಜ್ಞೆಯನ್ನು ರದ್ದು ಮಾಡಬಹುದಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾವು ನೇರವಾಗಿ ಅದನ್ನು ರದ್ದು ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಷೋಕಾಸ್ ನೋಟೀಸ್ ಕೊಟ್ಟು ಎಕ್ಸ್‌ಪ್ಲೆನೇಷನ್ ತೆಗೆದುಕೊಂಡು ಕ್ಯಾನ್ಸಲ್ ಮಾಡಬೇಕಾಗುತ್ತದೆ. ಬಾಲಕೃಷ್ಣೇಗೌಡರಿಗೆ ೧೯೬೬ರಲ್ಲಿ ಮಂಜೂರ್ಮಾಡಿದ ನಿವೇಶನದಲ್ಲಿ ೧೨ ತಿಂಗಳೊಳಗೆ ಮನೆ ಕಟ್ಟಿಸಿಕೊಳ್ಳಬೇಕೆಂದು ಕಾಲಮಿತಿಯನ್ನು ಗೊತ್ತುಮಾಡಲಾಗಿತ್ತು. ಆದರೆ ಅವರು ಆ ವೇಳೆಯಲ್ಲಿ ಕಟ್ಟಿಸಿಕೊಳ್ಳಲಿಲ್ಲವೆಂದು ಷೋಕಾಸ್ ನೋಟಿಸ್ ಕೊಟ್ಟಾಗ ಅವರು ಇನ್ನೂ ಒಂದೆರಡು ವರ್ಷ ಕಾಲಾವಕಾಶ ಕೊಡಿ ಎಂದು ಸರ್ಕಾರವನ್ನು ಕೇಳಿಕೊಂಡರು. ಸರ್ಕಾರ ೨೭-೯-೮೦ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ ಅವರಿಗೆ ೨೪-೫-೮೩ರವರೆಗೆ ಕಾಲಾವಕಾಶವನ್ನು ಕೊಟ್ಟಿದೆ. ಅಷ್ಟರಲ್ಲಿ ಅವರು ಮನೆ ಕಟ್ಟಿಸಿಕೊಳ್ಳದಿದ್ದರೆ ಕ್ಯಾನ್ಸಲ್ ಮಾಡಬಹುದು.

ಶ್ರೀ ಜಿ. ರಾಜೂಗೌಡ.—ಮಂಜೂರಾತಿ ಪತ್ರದಲ್ಲಿ ಕಾಲಮಿತಿಯನ್ನು ಒಂದು ವರ್ಷವೆಂದು ಗೊತ್ತು ಮಾಡಿದ್ದರೂ ೮ ತಿಂಗಳಲ್ಲೇ ಮಂಜೂರಾತಿ ಆಜ್ಞೆಯನ್ನು ರದ್ದು ಮಾಡಿದಾಗ ಸಿವಿಲ್ ಕೋರ್ಟಿಗೆ ಹೋದರೆ ಪರಿಣಾಮ ಏನಾಗುತ್ತದೆ? ಸರ್ಕಾರ ಜಮೀನನ್ನು ಮಂಜೂರ್ಮಾಡತಕ್ಕ ಕಾಲದಲ್ಲಿ ಯಾವ ಉದ್ದೇಶಕ್ಕೆ ಭೂಮಿಯನ್ನು ಕೊಟ್ಟಿದೆಯೋ ಅದನ್ನು ಪೂರ್ಣ ಪ್ರಮಾಣದಲ್ಲಿ ನೆರವೇರಿಸಬೇಕೆಂದು ಮಾಡಿದ್ದಿರಿ. ಆದರೆ ಮತ್ತೆ ಕಾಲಾವಧಿಯನ್ನು ವಿಸ್ತರಿಸಬೇಕೆಂದಾಗ ಯಾರ ಪ್ರಭಾವಕ್ಕೆ ಒಳಗಾಗಿ ಮಾಡಿದ್ದೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅದನ್ನು ಈ ಕಾಲದಲ್ಲಿ ಮಾಡಿದ್ದು ಅಲ್ಲ ೧೯೬೬ರಲ್ಲಿ ಆ ಜಮೀನನ್ನು ಕೊಟ್ಟದ್ದು. ಅಲ್ಲಿಂದ ತಾವು ಪ್ರಶ್ನೆ ಹಾಕುವವರೆಗೆ ಅದು ಹಾಗೆಯೇ ನಡೆದುಕೊಂಡು ಬಂದಿದೆ. ಹಿಂದಿನ ಸರ್ಕಾರ ಕೂಡ ಕಾಲಾವಧಿಯನ್ನು ಮುಂದುವರೆಸಿದೆ. ಈಗಲಾದರೂ ಅದರಂತೆ ಮಾಡದೆ ಹೋದರೆ ನಾನು ಕ್ಯಾನ್ಸಲ್ ಮಾಡುತ್ತೇನೆ.

ಶ್ರೀ ಜಿ. ರಾಜೂಗೌಡ.—ಕಾಲವನ್ನು ವಿಸ್ತರಣೆ ಮಾಡುವುದಕ್ಕೆ ಅಧಿಕಾರ ಇಲ್ಲದಿರುವಾಗ ಅವಧಿಯನ್ನು ಕೊಡತಕ್ಕ ಉದ್ದೇಶವೇನು? ಮಂಜೂರಾತಿಯನ್ನು ನೇರವಾಗಿ ಕ್ಯಾನ್ಸಲ್ ಮಾಡಿ. ಅದನ್ನು ಸಾರ್ವಜನಿಕ ಕೆಲಸಗಳಿಗೆ ಕೊಡಿ. ಇವತ್ತು ನಮ್ಮಲ್ಲಿ ಹರಿಜನ ಮಕ್ಕಳಿಗೆ ವಿದ್ಯಾರ್ಥಿನಿಲಯ ಕಟ್ಟಲು ಸ್ಥಳಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅದನ್ನು ನಾನು ಆಗಲೇ ಹೇಳಿದೆ. ಯಾವ ಉದ್ದೇಶಕ್ಕಾಗಿ ಅವರಿಗೆ ಆ ಜಮೀನನ್ನು ಕೊಡಲಾಗಿದೆಯೋ ಆ ಉದ್ದೇಶವನ್ನು ಅವರು ಪೂರ್ಣ ಮಾಡದೆ ಇದ್ದರೆ ನಾವು ಷೋಕಾಸ್ ನೋಟೀಸ್ ಕೊಟ್ಟು ನಮ್ಮ ವಶಕ್ಕೆ ತೆಗೆದುಕೊಂಡು ನಮಗೆ ಬೇಕಾದ ಕೆಲಸಕ್ಕೆ ಉಪಯೋಗಿಸಿಕೊಳ್ಳಬಹುದು. ೧೭-೯-೭೯ರಲ್ಲಿ ಅವರಿಗೆ ಷೋಕಾಸ್ ನೋಟೀಸ್ ಕೊಟ್ಟಾಗ, ನನಗೆ ಮುನಿಸಿಪಾಲಿಟಿಯವರು ಮನೆ ಕಟ್ಟಿಸಿಕೊಳ್ಳಲು ಅನುಮತಿ ಕೊಡುವುದರಲ್ಲಿ ವಿಳಂಬವಾಗಿದೆ ಯಾವ ಕಾರಣ ಕಾಲಾವಧಿಯನ್ನು ವಿಸ್ತರಿಸಿ ಕೊಡಬೇಕೆಂದು ಕೇಳಿಕೊಂಡದ್ದಕ್ಕೆ ಹಿಂದಿನ ಸರ್ಕಾರ ಕಾಲಾವಧಿಯನ್ನು ವಿಸ್ತರಿಸಿದೆ. ಒಂದು ವೇಳೆ ಅವರು ಆ ಕಾಲಾವಧಿಯಲ್ಲೂ ಸಹ ಮನೆ ಕಟ್ಟದಿದ್ದರೆ ಆ ಜಮೀನನ್ನು ನಾನು ಕ್ಯಾನ್ಸಲ್ ಮಾಡಬಹುದು. ತಾವು ಈಗ ಹರಿಜನರ ಹಾಸ್ಟೆಲಿಗೆ ಜಾಗ ಬೇಕಾಗಿದೆ

ಎಂದು ಹೇಳುತ್ತಿದ್ದೀರಿ, ಹಿಂದೆ ಕೆಲವರು ಅವರಲ್ಲಿ ಸರ್ಕಾರೀ ಕಚೇರಿಗಳನ್ನು ಕಟ್ಟಿಸಬೇಕೆಂದು ಹೇಳುತ್ತಿದ್ದರು. ಆದ್ದರಿಂದ ಅದು ಏನಾಗುತ್ತದೆಂಬುದನ್ನು ನೋಡೋಣ.

ಶ್ರೀ ಜಿ. ರಾಜೂಗೌಡ.—ತಾವು ಒಂದು ಕಡೆ ಕೊಟ್ಟ ಉದ್ದೇಶ ಪೂರ್ಣವಾಗದೆ ಇದ್ದರೆ ಆ ಭೂಮಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಜಿಲ್ಲಾ ಅಧಿಕಾರಿಗಳಿಗೆ ಆದೇಶ ನೀಡಿದ್ದೀರಿ, ಮತ್ತೊಂದು ಕಡೆ ಅವಧಿಯನ್ನು ವಿಸ್ತರಿಸಿದ್ದೀರಿ. ಈ ನೀತಿ ಸರಿಯೆ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹಿಂದಿನ ಸರ್ಕಾರ ೨೪-೫-೮೩ರವರೆಗೆ ಕಾಲಾವಧಿಯನ್ನು ವಿಸ್ತರಿಸಿರುವುದರಿಂದ ಈಗ ಅದನ್ನು ರದ್ದು ಮಾಡುವುದಕ್ಕಾಗುವುದಿಲ್ಲ. ಅಷ್ಟರಲ್ಲಿ ಅವರು ಮನೆ ಕಟ್ಟಿದ್ದರೆ ರದ್ದು ಮಾಡಬಹುದು.

ಶ್ರೀ ಜಿ. ರಾಜೂಗೌಡ.—ಮಾನ್ಯ ಬಸವಲಿಂಗಪ ನವರು ಕಂದಾಯ ಮಂತ್ರಿಗಳಾಗಿದ್ದಾಗ ಅದನ್ನು ಕ್ಯಾನ ಲ್ ಮಾಡಿದ್ದಾರೆ. ದಯಮಾಡಿ. ಅನ್ನು ನೋಡಿ.

QUESTIONS FOR ANSWERS ON THE DAY
(but not taken up)
Development of Western Ghats.

612. SRI P. ANANDA KUNDA HEGDE (Brahmavar).—Will the Chief Minister be pleased to state.—

(a) amount sanctioned to the Karnataka State, in 6th Five Year Plan for the development Scheme of Western Ghats ;

(b) the programmes chalked-out by the State Government for development of various divisions under the Western Ghats Aid Scheme? (Details may be furnished)

SRI R. GUNDU RAO (Chief Minister).—

(a) Planning Commission has intimated that, a sum of Rs. 1,445-00 lakhs will be provided in the 6th Five Year Plan for development of Western Ghats.

(b) Under this Scheme action has been taken in the field of Animal Husbandry, Horticulture, Agriculture, Irrigation, Small Scale Industries, Forest Development, construction of approach canals, flood control, tourism, wind power and sericulture. In the field of veterinary artificial insemination centres are established and are those being continued. Mobile veterinary school and dairy production programmes will be continued. Farms have been established in the field of Horticulture and loan will be given by the Land Development Bank for programmes of horticulture. In the field of agriculture programmes of soil conservation, method of rapid agriculture and pilot scheme which have already been established will be continued. Priority will be given to minor irrigation, construction of approach canal and forest development Bee rearing Handicrafts, coir development programme, programmes of construction of industrial sheds in the field of industry have been taken